**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 23-08-2024.**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ :**

**1)** ನಾನು ಮದುವೆಯಾದಾಗಿನಿಂದ ಗೊಲ್ಲುಮುದ್ದೇನಹಳ್ಳಿ ಗ್ರಾಮದಲ್ಲಿ ವಾಸವಿರುತ್ತೇನೆ. ನನ್ನ ಜೊತೆಯಲ್ಲಿ ನನ್ನ ಗಂಡ ಮುನಿರಾಜು ಸಹ ಸದರಿ ಗ್ರಾಮದಲ್ಲಿ ವಾಸಿಸುತ್ತಿದ್ದರು. ನನ್ನ ಮಕ್ಕಳೂ ಸಹ ಈಗ ಅದೇ ಮನೆಯಲ್ಲಿ ವಾಸಿಸುತ್ತಿದ್ದಾರೆ. ಈ ದಾವೆಯನ್ನು ನಾನು ಪ್ರತಿವಾದಿಗಳ ವಿರುದ್ಧ ನಮ್ಮ ತಂದೆ ಬರೆದುಕೊಟ್ಟ ಪತ್ರದ ಆಧಾರದ ಮೇಲೆ ಸಲ್ಲಿಸಿರುತ್ತೇನೆ. ನನಗೆ ದಾವಾ ಸರ್ವೆ ಸಂಖ್ಯೆ ಮತ್ತು ವಿಸ್ತೀರ್ಣವನ್ನು ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಸ್ವಾಧೀನವನ್ನು 1 ನೇ ಪ್ರತಿವಾದಿ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದಿ 10 ವರ್ಷಗಳಾಗಿರುತ್ತವೆ. ದಿನಾಂಕವನ್ನು ನಿಖರವಾಗಿ ಹೇಳಲು ನನಗೆ ಸಾಧ್ಯವಿಲ್ಲ. ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾಸ್ವತ್ತು ನಮ್ಮ ತಂದೆಗೆ ಅವರ ಪೂರ್ವಜರಿಂದ ಬಂದಿರುತ್ತದೆ. ನಮ್ಮ ತಂದೆಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಗಂಡು ಮಗನ ಹೆಸರು ನಾಗರಾಜ ಹಾಗೂ ಹೆಣ್ಣು ಮಕ್ಕಳ ಹೆಸರು ಆಂಜಿನಮ್ಮ, ಲಕ್ಷ್ಮಮ ಮತ್ತು ಶಾರದಮ್ಮ ಆಗಿರುತ್ತದೆ. ನಮ್ಮ ಸಹೋದರ ಮತ್ತು ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ದಾವಾಸ್ವತ್ತು ನಮ್ಮ ತಂದೆಗೆ ಅವರ ಪೂರ್ವಜರಿಂದ ಬಂದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ತಂದೆ ನನಗೆ ಬರೆದುಕೊಟ್ಟ ಪತ್ರ ಯಾವುದು ಎಂದು ಹೇಳಲು ಬರುವುದಿಲ್ಲ. ನಮ್ಮ ತಂದೆಗೆ ಮರಣ ಹೊಂದುವ ಸಮಯದಲ್ಲಿ ಕಾಯಿಲೆಗಳು ಇದ್ದವು ಎಂದರೆ ಸರಿ. ಅವರಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿ. ಅವರಿಗೆ ಹೇಳಿದ್ದನ್ನು ತಿಳಿದುಕೊಳ್ಳುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು

ಮುಂದುವರೆದು ಮಾತನ್ನಾಡಲೂ ಸಹ ಬರುತ್ತಿರಲಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಓದು ಬರಹ ಇರಲಿಲ್ಲ. ನಮ್ಮ ತಂದೆ ಬರೆದುಕೊಟ್ಟಿರುವ ಪತ್ರವನ್ನು ನನಗೆ ನಮ್ಮ ತಾಯಿ ಕೊಟ್ಟರು. ನಮ್ಮ ತಾಯಿ ಮೂರು ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಮ್ಮ ತಾಯಿ ಪತ್ರವನ್ನು ನನ್ನ ಕೈಗೆ ನೀಡಿರುತ್ತಾರೆ, ನನ್ನ ಗಂಡನ ಕೈಗೆ ನೀಡಿರುವುದಿಲ್ಲ. ನಮ್ಮ ತಾಯಿಯ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೋ ಎಂದು ನನಗೆ ಗೊತ್ತಿಲ್ಲ. ನಮ್ಮ ತಾಯಿ ನನಗೆ ವಿಲ್ಲಾಮೆಯನ್ನು ನೀಡಿದಾಗ ಅದನ್ನು ಯಾರೂ ಸಹ ನೋಡಿರುವುದಿಲ್ಲ. ಸದರಿ ಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನಿ.ಪಿ.1 ದಾವಾ ಸ್ವತ್ತನ್ನು ಕಬಳಿಸಲು ನನ್ನ ಗಂಡ ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ನನ್ನ ಗಂಡ ನಮ್ಮ ತಂದೆಯನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಅವರು ನಿ.ಪಿ.1 ನ್ನು ನೋಂದಣೆ ಮಾಡಿಸಿರುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಓದು ಬರಹ ಗೊತ್ತು. ನಮ್ಮ ತಂದೆಯ ಕಾಯಿಲೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ವಿಲ್ ನಾಮೆ ಮಾಡಿರುವ ವಿಚಾರ ಅದನ್ನು ನಮ್ಮ ತಾಯಿ ನನ್ನ ಕೈಗೆ ನೀಡುವ ಪೂರ್ವದಲ್ಲೇ ನನಗೆ ಗೊತ್ತಿತ್ತು. ನನ್ನ ಗಂಡ ನಮ್ಮ ತಂದೆಯನ್ನು ನನಗೆ ತಿಳಿಸಿ ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಸರ್ವೆ ಸಂಖ್ಯೆ 77-1 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಸ್ವಾಧೀನವನ್ನು ನಾನು ಹೊಂದಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದು. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ನನಗೆ ನಾನು ಸಲ್ಲಿಸಿದ ದಾಖಲೆಗಳ ಬಗ್ಗೆ ಗೊತ್ತಿಲ್ಲ. ನನ್ನನ್ನು ನ್ಯಾಯಾಲಯಕ್ಕೆ ಈ ದಿನ ನನ್ನ ಮಗ ಕರೆದುಕೊಂಡು ಬಂದಿರುತ್ತಾರೆ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ 2 ನೇ ಪ್ರತಿವಾದಿ ವಿರುದ್ಧ ಸಲ್ಲಿಸಿದ್ದ ಸಿವಿಲ್ ದಾವೆ ಬಗ್ಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ನಮ್ಮ ತಂದೆ ರಾಜೀ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ 2 ನೇ ಪ್ರತಿವಾದಿ ದಾವಾಸ್ವತ್ತಿನ

ಮಾಲೀಕರು ಎಂದು ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಗಂಡ ಮತ್ತು ಮಗ ಸೇರಿ ದಾವಾಸ್ವತ್ತನ್ನು ಕಬಳಿಸಲು ನಿ.ಪಿ.1 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**